ಜಾಣರ ಪೆಟ್ಟಿಗೆ

## ಸೀತಾ-ರಾಮರ ಮದುವೆಗೆ ಕಾಯಿಸಬೇಡಿ

ಝೀ ಕನ್ನಡದ 'ಸೀತಾರಾಮ' ಅದ್ಭುತವಾಗಿ ಮೂಡಿಬರುತ್ತಿದೆ. ಒಂದೇ ಬೇಸರದ ಸಂಗತಿಯೆಂದರೆ, ಎಷ್ಟು ದಿನ ಕಳೆದರೂ ಸೀತಾರಾಮ ಕಲ್ಯಾಣಕ್ಕೆ ಕಾಲ ಕೂಡಿ ಬರುತ್ತಿಲ್ಲ. ಎಲ್ಲ ವಿಘ್ನಗಳಿಂದ ಪಾರಾದರೂ ಅದೇಕೋ ನಿರ್ದೇಶಕರು ಇವರ ಮದುವೆ ಮಾಡಿಸಲು ಮನಸು ಮಾಡುತ್ತಿಲ್ಲ.

ನಾವೆಲ್ಲ ಆಗಲೇ ಸೀತಾರಾಮರ ಮದುವೆ ಆಮಂತ್ರಣ ಪತ್ರಿಕೆ ಸಿದ್ಧ ಮಾಡಿಟ್ಟುಕೊಂಡಿದ್ದೇವೆ. ಅದರಲ್ಲಿ ದಿನಾಂಕ, ಛತ್ರದ ಹೆಸರು ಖಾಲಿ ಬಿಟ್ಟಿದ್ದು, ಅದನ್ನು ಭರ್ತಿ ಮಾಡುವುದೊಂದೇ ಬಾಕಿ. ಪುರೋಹಿತರು, ಅಡುಗೆ, ವಾಲಗ, ಎಲ್ಲವೂ ಬುಕ್ ಆಗಿದೆ. ನಮ್ಮನ್ನು ಇನ್ನು ಹೆಚ್ಚು ಕಾಯಿಸಬೇಡಿ. ಆದಷ್ಟು ಬೇಗ ಮಂಗಳಕಾರ್ಯ ನೆರವೇರಲಿ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ



## ಕೆಲಸದ ಮರೆವು, ಉಳಿದುದೆಲ್ಲ ಮೆರೆವು

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ನಾಯಕನ ಅತ್ತೆ ಮತ್ತು ಮಗಳು ಸುಮಾರು ಆರು ತಿಂಗಳ ನಂತರ ಮತ್ತೆ ಕಾಣಿಸಿಕೊಂಡು, ಪೆಕರುಪೆಕರಾಗಿ ವರ್ತಿಸುತ್ತಿದ್ದಾರೆ. ಇವರಿಬ್ಬರ ಮರುಪ್ರವೇಶದ ಅಗತ್ಯ ಏನು ಎಂಬುದೇ ಗೊತ್ತಾಗುತ್ತಿಲ್ಲ. ರಾಮಾಚಾರಿಯ ತಾಯಿ ಬಾಯಿ ಬಡಿದುಕೊಂಡು ರೋದಿಸುವ ದೃಶ್ಯಗಳು ಪುನರಾವರ್ತನೆ ಆಗುತ್ತಲೇ ಇವೆ. ನಾಯಕಿಯ ಅಮ್ಮನ ಪಾತ್ರ ಹೆಣ್ಣುಕುಲಕ್ಕೇ ಅವಮಾನ ಅನ್ನೋ ಮಟ್ಟಿಗೆ ಬೆಳೆಯುತ್ತಲೇ ಇದೆ. ಇದೆಲ್ಲದರ ನಡುವೆ, ನಾಯಕ ಮತ್ತು ನಾಯಕಿ ಬಹುಶಃ 'ವರ್ಕ್ ಫ್ರಮ್ ಹೋಮ್' ತೆಗೆದುಕೊಂಡಿರಬೇಕು! ಏಕೆಂದರೆ, ಅವರ ಆಫೀಸಿನ ಸುದ್ದಿಯೇ ಇಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಟೀವಿ ಬಂದ್ ಮಾಡೋದೆ ಮದ್ದು

ಇತ್ತೀಚಿನ ಧಾರಾವಾಹಿಗಳು 'ಸಂತೆಗೆ ಮೂರು ಮೊಳ' ಎಂಬಂತೆ ಆಗಿವೆ. ಅಂದಂದಿನ ಏನು ವಿಶೇಷ ಎನ್ನುವುದನ್ನು ನೋಡಿ ಅದಕ್ಕೆ ತಕ್ಕಂತೆ ಚಿತ್ರೀಕರಣ ಮಾಡುತ್ತಿದ್ದಾರೆ. ಆದರೆ, ವೀಕ್ಷಕರು ಮೂರ್ಖರಲ್ಲ. ಇದನ್ನು ವಾಹಿನಿಯವರು ತಿಳಿಯದಿರುವುದು ಅವರ ದಡ್ಡತನ. ಬಹಳಷ್ಟು ಸಂದರ್ಭದಲ್ಲಿ ಟೀವಿ ಆಫ್ ಮಾಡುವುದು ಸರಿಯಾದ ಮದ್ದು ಎಂದು ಹಾಗೆಯೇ ಮಾಡುತ್ತಿದ್ದೇವೆ.

ಇತ್ತೀಚೆಗೆ 'ಮದರ್ಸ್ ಡೇ' ಇತ್ತು. ಅದು ಧಾರಾವಾಹಿಯಲ್ಲೂ ಬರಬೇಕು. ಕಥೆಗೆ ಪೂರಕವಲ್ಲದ ಹಬ್ಬ ಆಚರಣೆಗಳು ಸಲೀಸಾಗಿ ನುಸುಳುತ್ತಿವೆ. ಹತ್ತು ಹದಿನೈದು ಕಂತುಗಳ ಕಥಾಭಾಗವನ್ನು ನೂರಾರು ಕಂತುಗಳಿಗೆ ಹಿಗ್ಗಿಸುತ್ತಾರೆ. ಆರಂಭದ ಕಂತುಗಳ ಕುತೂಹಲ ಕೆಲವೇ ದಿನಗಳಲ್ಲಿ ಕಳೆದುಹೋಗುತ್ತದೆ. ಇಂತಹ ಅಸಹಜ ಪದ್ಧತಿಗಳನ್ನು ಹೊರತುಪಡಿಸಿ, ಪೂರ್ವ ನಿರ್ಧರಿತ ಕಥೆಗೆ ಒತ್ತು ನೀಡಲಿ.

—ಶಿವಮೊಗ್ಗ ರಮೇಶ್, ಮೈಸೂರು

## ಇದು ಹೊಸ ರಾಮಾಯಣ

ಉದಯದ 'ಶ್ರೀಮದ್ ರಾಮಾಯಣ' ಧಾರಾವಾಹಿ ಮೊದಲ ಸಂಚಿಕೆಯಲ್ಲೇ ಗಮನ ಸೆಳೆಯಿತು. ಅದ್ಭುತ ವಸ್ತ್ರವಿನ್ಯಾಸ, ಗ್ರಾಫಿಕ್ಸ್ ಕೈಚಳಕ, ಸ್ಪಷ್ಟ ಹಾಗೂ ಪರಿಣಾಮಕಾರಿ ಸಂಭಾಷಣೆಯೊಂದಿಗೆ ಕಥೆಗೆ ಒಂದು ವೈಭವವನ್ನೇ ತಂದಿದ್ದಾರೆ. ದೊಡ್ಡವರು ಮಕ್ಕಳಾದಿಯಾಗಿ ನೋಡಬಹುದಾದ 'ಮಹಾಕಾವ್ಯ' ಒಂದು ಉತ್ತಮ ಧಾರಾವಾಹಿಯಾಗಿ ಮೂಡಿಬರುತ್ತಿರುವುದು ಖುಷಿ ಕೊಟ್ಟಿದೆ.

—ಭಾರತೀ ಗಂಗಾಧರ್, ಬೆಂಗಳೂರು



## ಅಪರೂಪದ ಮೋರ್ಚಿಂಗ್ ಕಲೆ

ಚಂದನವಾಹಿನಿಯ 'ಶುಭೋದಯ ಕರ್ನಾಟಕ'ದಲ್ಲಿ ಮೋರ್ಚಿಂಗ್ ಕಲಾವಿದೆ ಭಾಗ್ಯಲಕ್ಷ್ಮಿ ಎಂ. ಕೃಷ್ಣ ಅವರ ಕಾರ್ಯಕ್ರಮ ಅಮೋಘವಾಗಿತ್ತು. ಆ ವಾದ್ಯದ ತಯಾರಿಕೆ, ಅದರಿಂದ ಹೊಮ್ಮುವ ಮಧುರ ನಾದದ ಬಗೆಯನ್ನು ವಿವರಿಸಿದ ರೀತಿಯು ಸುಂದರವಾಗಿತ್ತು. ಅವರ ಇಡೀ ಕುಟುಂಬವೇ ಈ ವಾದ್ಯದಲ್ಲಿ ಪ್ರಾವೀಣ್ಯತೆ ಗಳಿಸಿದೆ. ಕಲಾವಿದರ ಕುಟುಂಬದ ಬಗ್ಗೆ ತಿಳಿದು ಸಂತೋಷವಾಯಿತು. ಯಾವುದೇ ಸಾಧನೆಗೂ ಮನೆಯವರ ಸಹಕಾರ ಅತ್ಯಗತ್ಯ. ಇಂತಹ ಅಪರೂಪದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿರುವ ಚಂದನವಾಹಿನಿಗೂ ಅಭಿನಂದನೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಭಾಗ್ಯಲಕ್ಷ್ಮಿ: ಅತಿ ಮುಗ್ಧತೆ ಸಹಜವೇನಲ್ಲ

ಕಲರ್ಸ್ ಕನ್ನಡ ವಾಹಿನಿಯ 'ಭಾಗ್ಯಲಕ್ಷ್ಮಿ' ಧಾರಾವಾಹಿಯನ್ನು ಬಹಳ ಕಾತರದಿಂದ ನೋಡುತ್ತಿದ್ದೆವು. ಇತ್ತೀಚೆಗೆ ಯಾಕೋ ಬೋರ್ ಹೊಡೆಯುತ್ತಿದೆ. ಭಾಗ್ಯಾಳ ಮುಗ್ಧತೆ ವಿಚಿತ್ರವಾಗಿದೆ. ಹೋಟೆಲಿನ ಕೆಲಸಕ್ಕೆಂದು ಹೋದವಳಿಗೆ ಅಲ್ಲಿ ಕೇಳಿದ ಪ್ರಶ್ನೆಗಳು ಅರ್ಥವಾಗದಿದ್ದುದೇನೋ ಸರಿ. ಆದರೆ ಕಮಿಟಿಯವರು ಟುಮಾರೋ ಬನ್ನಿ ಎಂದು ಹೇಳಿದಾಗ ತಬ್ಬಿಬ್ಬಾದವಳಂತೆ ವರ್ತಿಸುವುದು ನಾಟಕೀಯ ಅನ್ನಿಸುತ್ತಿದೆ. ಓದದಿದ್ದರೂ ಸರಳ ಇಂಗ್ಲಿಷ್ ಪದಗಳು ಅರ್ಥ ಆಗುತ್ತವೆ.

ಹತ್ತನೇ ತರಗತಿ ಪರೀಕ್ಷೆ ಬರೆದಿರುವವಳಿಗೆ ಅದು ಅರ್ಥ ಆಗಲಿಲ್ಲವೆಂದರೆ ಹಾಸ್ಯಾಸ್ಪದ. ಅತಿ ಮುಗ್ಧತೆ ಮೈ ಪರಚಿಕೊಳ್ಳುವಂತೆ ಮಾಡುತ್ತಿದೆ. ಅವಳ ಅತ್ತೆಯಂತೂ ಹೋಟೆಲಿನಲ್ಲಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾಳೆ. ಸ್ವಲ್ಪ ವಾಸ್ತವಿಕತೆಗೆ ಒತ್ತು ಕೊಡಿ.

—ಪುಷ್ಪ ಎನ್.ಕೆ. ರಾವ್

## ಮೆರುಗು ತಂದ ಬಾಲಕೃಷ್ಣ

'ಚಂದನ' ವಾಹಿನಿಯಲ್ಲಿ ಪ್ರತಿ ವಾರ ಸಿನಿಮಾ ದಿಗ್ಗಜರ ಪರಿಚಯ ಮಾಡುತ್ತಿದ್ದಾರೆ. ಇದೊಂದು ವಿಶಿಷ್ಟ ಕಾರ್ಯಕ್ರಮ ಅನ್ನಿಸುತ್ತದೆ. ಈಚೆಗೆ ನಟ ಟಿ.ಎನ್. ಬಾಲಕೃಷ್ಣ ಅವರನ್ನು ಮಾತನಾಡಿಸಿದ್ದು ಈ ಕಾರ್ಯಕ್ರಮಕ್ಕೆ ಮೆರುಗು ತಂದಿದೆ. ಅವರ ಬಾಲ್ಯದಿಂದ ಬೆಳೆದು ಬಂದ ಬಗೆ ಬೆರಗು ಮೂಡಿಸಿತು. ನಿಜಕ್ಕೂ ಅವರದು ದಿಗ್ಗಜ ಸಾಧನೆಯೇ ಸರಿ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು